


ಪ್ಲೇಬಾಯ್ ನಿಯತಕಾಲಿಕವೆಂದರೆ ನಮ್ಮ ಬಾಯ್‌ಗಳು ಬಾಯ್ಬಾಯ್ ಬಿಡುವಾಗ ಅದೂ ಕೂಡಾ ಆಗಾಗ ಗಿಮಿಕ್ ಮಾಡ್ತಲೇ ಇರ್ತದೆ. ದೃಶ್ಯ ಮಾಧ್ಯಮಕ್ಕೆ ಮಾತ್ರ ತ್ರೀಡಿ ಯಾಕೆ, ನಮಗೂ ಇರಲಿ ಎಂದು ನಿಯತಕಾಲಿಕದೊಳಗಿನ ಚಿತ್ರವೊಂದನ್ನು ತ್ರೀಡಿ ಮಾಡಿದೆ. ಸ್ಯಾಂಪಲ್ ಅನ್ನು ಅಂಗಡಿಯಲ್ಲೇ ನೋಡೋಣ ಎಂದು ಕವರ್ ಮೇಲೆ ಕಣ್ಣು ಹಾಯಿಸಿದರೆ ಎಲ್ಲಿ ಬೇಕೋ ಅಲ್ಲೇ ತ್ರೀಡಿ ಕನ್ನಡಕ ಕೂರಿಸಿ ಯಾಮಾರಿಸಿದ್ದಾರೆ ಪ್ಲೇಬಾಯ್ ಸಂಪಾದಕರು.

ಪೋಕರ್ ಆಟವಾಡುತ್ತಿರುವ ಈ ಜರ್ಮನಿ ಪೋಕ್ರಿಗಳ ಸಂಶೋಧನೆ ನೋಡಿ. ಆಟಕ್ಕೆ ಕಣ್ಣು, ಕೈ, ತಲೆಯ ಜೊತೆ ಕಾರ್ಡುಗಳು ಇದ್ದರೆ ಉಡುಪುಗಳಿಗೆ ಅಲರ್ಜಿ ಎಂದು ಬಿಸಾಡಿ ಕೂತಿದ್ದಾರೆ. ಆಡುವವರು ಹಣ ಕಳೆದುಕೊಂಡರೆ ಸಾಲದು, ಮೈಮೇಲಿನ ಉಡುಪನ್ನೂ ಕಳೆದುಕೊಳ್ಳಬೇಕು ಎಂದು ಸ್ಟ್ರಿಪ್‌ಟೀಸ್- ಉಡುಪು ಬಿಚ್ಚಾಣಿಕೆ ಸೂತ್ರವನ್ನು ಅಳವಡಿಸಿಕೊಂಡಿದ್ದಾರೆ. ಒಂದೊಂದೇ ಆಟ ಸೋತಂತೆ, ಒಂದೊಂದೇ ಉಡುಪಿಗೂ ಮುಕ್ತಿ.




ನೈಜೀರಿಯಾ ಅಧ್ಯಕ್ಷ ಜೋನಾಥನ್‌ರನ್ನು 'ಲಕ್ ಬೈ ಚಾನ್ಸ್' ಹಿಂಬಾಲಿಸುತ್ತಿದೆ. ಹಿಂದಿದ್ದ ಗವರ್ನರ್ ಚೋರ ಎಂದು ಜೋರನ್ನು ಆ ಜಾಗಕ್ಕೆ ತಂದರು. ಚುನಾಯಿತ ಅಧ್ಯಕ್ಷ ಕಳೆದ ತಿಂಗಳು ಮೃತಪಟ್ಟಾಗ ದೇಶದ ಅಧ್ಯಕ್ಷಗಿರಿ ಒಲಿದು ಬಂತು. ಈಗ ಅಲ್ಲಿಯ ಯೂನಿಯನ್ ಬ್ಯಾಂಕ್ ತನ್ನ ಗ್ರಾಹಕರಿಗೆಂದು ಲಾಟರಿ ಎತ್ತಿದಾಗ ಜೋ ಅವರ ಪತ್ನಿಗೆ ಬೈಕ್ ಬಹುಮಾನ ಬಂದಿದೆ. ಮುಂದೇನು ಕಾದಿದೆ ಜೋ?

ಯೋಗದಿಂದ ದೇಹ, ಮನಸ್ಸು ಎಲ್ಲವೂ ಆರೋಗ್ಯದಿಂದ ನಳನಳಿಸಿದರೆ ಸಾಕೇ? ಇಲ್ಲ, ಮನೆಯ ತುಂಬ ನೆಗೆಯುವ ಮುದ್ದುಪ್ರಾಣಿಯೂ ಆರೋಗ್ಯದಿಂದ ಪುಟಿಯಬೇಕಲ್ಲ. ಈ ಪಾಶ್ಚಾತ್ಯರಿಗೆ ಅದೊಂದು ಹುಚ್ಚು. ಏನು ಮಾಡಿದರೂ ಮುದ್ದುಪ್ರಾಣಿಗೂ ಬೇಕು. ಈಗ ಭಾರತೀಯ ಯೋಗವನ್ನು ಒಯ್ದು ನಾಯಿ, ಬೆಕ್ಕಿನ ಮರಿಗಳಿಗೆ ಹೇರುತ್ತಿದ್ದಾರೆ. ನಮ್ಮ ಯೋಗಪಟುಗಳಿಗೆ ಯಾಕೆ ಹೊಳೆಯಲಿಲ್ಲವೋ?





ಬೆಂಗಳೂರು ಟ್ರಾಫಿಕ್ ಅನ್ನು ಹಸುಗಳು ನಿಯಂತ್ರಿಸಿದರೆ, ಗ್ರೀಸ್‌ನ ಹೆದ್ದಾರಿಯಲ್ಲಿ ಕಪ್ಪೆಗಳದ್ದೇ ಕಾರುಬಾರು. ಸಾವಿರಾರು ಕಪ್ಪೆಗಳು ಮನಬಂದಂತೆ ಕುಪ್ಪಳಿಸುತ್ತಿದ್ದರೆ ವಾಹನ ಚಾಲಕರು ಡ್ರೈವ್-ಇನ್ ಥಿಯೇಟರ್ ಥರ ಕಾರಿನಲ್ಲೇ ಕುಳಿತು ಅವುಗಳ ನೃತ್ಯ ನೋಡಬೇಕಾದ ಪರಿಸ್ಥಿತಿ. ಸಮೀಪದ ಸರೋವರದಿಂದ ಹೊರಟ ಈ ಮಂಡೂಕಗಳ ದಿಬ್ಬಣ 20 ಕಿ.ಮೀ. ಉದ್ದದ ಹೆದ್ದಾರಿಯನ್ನು ಗುತ್ತಿಗೆ ತೆಗೆದುಕೊಂಡಂತೆ ಕಾಣುತ್ತದೆ.

ಬಾಲಿವುಡ್ ಅನ್ನು ಬಗಲಲ್ಲೇ ಇಟ್ಟುಕೊಂಡಿರುವ ಮುಂಬೈ ಪೊಲೀಸರಿಗೆ ಡಿಸೈನರ್ ಸಮವಸ್ತ್ರ ಬರಲಿದೆ. ವಸ್ತ್ರ ವಿನ್ಯಾಸಕ ಮನೀಷ್ ಮಲ್ಹೋತ್ರ ಖಾಕಿ ಬದಲು ನೀಲಿ ಸಮವಸ್ತ್ರದ ಮೂಲಕ ಪೊಲೀಸರನ್ನು ರಂಗೇರಿಸಲಿದ್ದಾರೆ. ಉಡುಪಿನ ಮೂಲಕ ಪೊಲೀಸರನ್ನು ಸ್ಮಾರ್ಟ್ ಮಾಡಲು ಹೊರಟಿರುವ ಮಲ್ಹೋತ್ರ ಊದಿಕೊಂಡಿರುವ ಕೆಲವರ ಹೊಟ್ಟೆಗೆ ಯಾವ ವಿನ್ಯಾಸ ಮಾಡುತ್ತಾರೋ?



ನೀರು, ಲಘು ಪಾನೀಯ ಖಾಲಿ ಮಾಡಿ ಬೀದಿ ಬದಿ ಎಸೆಯುವ ಪ್ಲಾಸ್ಟಿಕ್ ಬಾಟಲ್‌ಗಳು ತೈವಾನ್‌ನಲ್ಲಿ ಬಿಲ್ಡಿಂಗ್ ಆಗಿ ಕೂತಿವೆ. 15 ಲಕ್ಷ ಬಾಟಲ್ ಬಳಸಿ ಪಾರದರ್ಶಕ ಸಭಾಭವನ, ಅದರೊಳಗೆ ಮತ್ತೂ ಪಾರದರ್ಶಕವಾದ ಬಾತ್‌ರೂಮುಗಳನ್ನು ಸಿದ್ಧಪಡಿಸಲಾಗಿದೆ. ಬಾಟಲ್ ಇರುವುದೇ ಎಲ್ಲೆಂದರಲ್ಲಿ ಸ್ಟೈಲಾಗಿ ಬಿಸಾಕಲು. ಈ ತೈವಾನಿಯರಿಗೆ ಯಾಕೆ ಬಂತು ಈ ಜುಗ್ಗತನ?

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65